ಓ.ಎಸ್ಃ 240-2015

ಪಿ. ಡಬ್ಲ್ಯು ಃ 04

**<u>ಸಾಕ್ಷಿಗೆ ದಿನಾಂಕ 22.12.2021 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ. ಸಿ ಆರ್ ಎಸ್ ವಕೀಲರಿಂದ</u>**

ಸೀತಮ್ಮ ನನಗೆ ಅಜ್ಜಿಯಾಗಬೇಕು. ನಾನು ಸೀತಮ್ಮ ರವರ ಮಗಳ ಮಗ. ನನ್ನ ತಂದೆ ಮೈಸೂರಿನವರು. ನನ್ನ ತಂದೆ ತಾಯಿ ಹಾಗೂ ನಾನು ಗಂಜಾಂನ ಶ್ರೀರಂಗಪಟ್ಟಣದಲ್ಲಿ ವಾಸವಿದ್ದೇವೆ. ವಾದಿ ದಾವ ಷೆಡ್ಯೂಲ್ ಸ್ವತ್ತನ್ನು ಶಾರದಮ್ಮ ರವರಿಂದ ಖರೀದಿಸಿರುತ್ತಾರೆ. ನಾನು ಚಿಕ್ಕವನಿದ್ದಾಗ ಆಸ್ತಿಯನ್ನು ಖರೀದಿಸಿರುತ್ತಾರೆ ನಾನು 5-6 ವರ್ಷಗಳ ಹಿಂದೆ ಕ್ರಯಪತ್ರವನ್ನು ನೋಡಿರುತ್ತೇನೆ. ನನ್ನ ಅಜ್ಜಿಯ ಮನೆಯ ಪಕ್ಕದಲ್ಲಿ ಪ್ರತಿವಾದಿಗೆ ಸೇರಿದ ಮನೆ ಹಾಗೂ ಖಾಲಿ ಜಾಗ ಇದೆ ಎಂದರೆ ಸರಿ. ಸದರಿ ಮನೆ ಹಾಗೂ ಖಾಲಿ ಜಾಗದ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಪ್ರತಿವಾದಿ ಸಿದ್ದಯ್ಯ ರವರಿಂದ ಖರೀದಿಸಿರುತ್ತಾರೆ ಎಂದು ನನಗೆ ನನ್ನ ಅಜ್ಜಿ ತಿಳಿಸಿರುತ್ತಾರೆ. ಪೂಃ ರಸ್ತೆ ಹಾಗೂ ಮಾರಿಗುಡಿ ಬೀದಿ, ಪಃ ರಸ್ತೆ , ಉಃ ಪ್ರತಿವಾದಿಯ ಮನೆ, ದಃ ಗುಂಬಜ್ ರೋಡ್ ರಂತೆ ನನಗೆ ಸೇರಿದ ಸ್ವತ್ತಿನ ಚೆಕ್ ಬಂದಿ ಇರುತ್ತದೆ.

ಸಾಕ್ಷಿಗೆ ನಿಡಿ 1 ರ ಭಾವಚಿತ್ರವನ್ನು ತೋರಿಸಲಾಗಿ ನಿಡಿ 1 ರ ಹಂಚಿನ ಮನೆ ಪ್ರತಿವಾದಿಗೆ ಸೇರಿದ ಮನೆ ಎಂದು ನುಡಿಯುತ್ತಾರೆ. ನಿಡಿ 1 ರಲ್ಲಿರುವ ಹನಚಿನ ಮನೆಯ ಮುಂಭಾಗ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ಅದು ರಸ್ತೆಯೆಂದು ತಿಳಿದುಕೊಂಡು ನಾವು ಅಲ್ಲಿಯೇ ಓಡಾಡುತ್ತೇವೆ ಎಂದು

ನುಡಿಯುತ್ತಾರೆ. ಸದರಿ ಜಾಗ ರಸ್ತೆಯೋ, ಖಾಲಿ ಜಾಗವೋ ಎಂದು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ರಲ್ಲಿ ವಾದಿ ತಳಪಾಯವನ್ನು ಹಾಕಿರುತ್ತಾರೆ. ನಿಡಿ 1 ರಲ್ಲಿ ತೋರಿಸಿರುವ ಆರ್ ಸಿ ಸಿ ಮನೆ ಸಿದ್ದಯ್ಯ ಹಾಗೂ ನಿಂಗಜ್ಜ ರವರಿಗೆ ಸೇರಿದ ಮನೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಆರ್ ಸಿ ಮನೆಯ ಮುಂಭಾಗದಲ್ಲಿ ಸಣ್ಣ-ಸಣ್ಣ ಗಿಡಗಳು ಬೆಳೆದಿದ್ದು ಸದರಿ ಜಾಗ ರಸ್ತೆಯಾಗಿದೆ. ನಿಡಿ 1 ರಲ್ಲಿ ಕಾಣಿಸಿರುವ ಶೆಡ್ಡನ್ನು ಸಿದ್ದಯ್ಯ ರವರು ತಮ್ಮ ದನ-ಕರುಗಳನ್ನು ಕಟ್ಟಲು ನಿರ್ಮಿಸಿರುತ್ತಾರೆ. ಸದರಿ ಶೆಡ್ಡನ್ನು ರಸ್ತೆಯ ಮೇಲೆ ನಿರ್ಮಿಸಲಿಲ್ಲ. ಶೆಡ್ಡನ್ನು ನಿರ್ಮಿಸಿರುವ ಸ್ಥಳವು ಸಿದ್ದಯ್ಯರವರಿಗೆ ಸೇರಿದ್ದು ಎಂದು ಅವರು ತಿಳಿಸಿರುತ್ತಾರೆ ನನಗೆ ಗೊತ್ತಿಲ್ಲ. ದಾವ ಷೆಡ್ಯೂಲ್ ಸ್ವತ್ತು ವಾದಿಗಾಗಲಿ ಅಥವಾ ಶಾರದಮ್ಮ ರವರಿಗಾಗಲಿ ಸೇರಿದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ.ನನಗೆ ಈ ದಾವೆಯ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ನಾನು ವಾದಿಯೊಂದಿಗೆ ಶರೀಕಾಗಿ ವಾದಿಗೆ ಸಹಾಯವಾಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ